ಮುಹಮ್ಮದ್ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ರವರ ಕುಟುಂಬದವರು ಮದೀನಕ್ಕೆ ಬಂದಾಗಿನಿಂದ, ಅವರು (ಪ್ರವಾದಿ) ಮರಣ ಹೊಂದುವವರೆಗೂ, ಸತತವಾಗಿ ಮೂರು ರಾತ್ರಿಗಳ ಕಾಲ ಗೋಧಿಯ ಆಹಾರದಿಂದ ಹೊಟ್ಟೆ ತುಂಬಿಸಿಲ್ಲ

ಉಮ್ಮುಲ್ ಮೂಮಿನೀನ್ ಆಯಿಶಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅವರು
ಹೇಳಿದರು: "ಮುಹಮ್ಮದ್ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ರವರ ಕುಟುಂಬದವರು ಮದೀನಕ್ಕೆ ಬಂದಾಗಿನಿಂದ, ಅವರು (ಪ್ರವಾದಿ) ಮರಣ ಹೊಂದುವವರೆಗೂ, ಸತತವಾಗಿ ಮೂರು ರಾತ್ರಿಗಳ ಕಾಲ ಗೋಧಿಯ ಆಹಾರದಿಂದ ಹೊಟ್ಟೆ ತುಂಬಿಸಿಲ್ಲ."
[صحيح] [متفق عليه]

ಉಮ್ಮುಲ್ ಮೂಮಿನೀನ್ ಆಯಿಶಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರವರು ತಿಳಿಸುವುದೇನೆಂದರೆ, ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಮನೆಯವರು ಮದೀನಕ್ಕೆ ಬಂದಾಗಿನಿಂದ, ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಮರಣ ಹೊಂದುವವರೆಗೂ, ಸತತವಾಗಿ ಮೂರು ದಿನಗಳ ಕಾಲ ಗೋಧಿಯ ಆಹಾರವನ್ನು ತಿಂದು ಹೊಟ್ಟೆ ತುಂಬಿಸಿಕೊಂಡಿಲ್ಲ.

https://sunnah.global/hadeeth/kn/show/65816